ಮದುವೆಯಾಗಿಲ್ಲ. ನೋಡಲು ಚೆಲುವೆ, ನೌಕರಿಯೂ ಇದೆ. ಆದರೂ ಇಲ್ಲಿಯವರೆಗೆ ಅವಳ ಮದುವೆಯಾಗಿಲ್ಲ, ಅಥವಾ ಅವಳು ಇದುವರೆಗೆ ಮದುವೆಯಾಗಿಲ್ಲ ಎಂದೂ ಹೇಳಬಹುದು. ಅವಳ ತಂದೆ ತೀರಿ ಹೋಗಿ ಹತ್ತು ವರ್ಷಗಳು ಕಳೆದಿವೆ. ಮದುವೆಯಾದ ಅಣ್ಣ ಅಮೆರಿಕೆಯಲ್ಲಿದ್ದಾನೆ. ಮದುವೆಯಾದ ತಂಗಿ ದುಬಾಯಿಯಲ್ಲಿದ್ದಾಳೆ. ವಯಸ್ಸಾದ ತಾಯಿ ಮನೆ ಸಂಭಾಳಿಸುತ್ತಾ ಒಂಟಿಯಾಗಿ ಗೋವೆಯಲಿದ್ದಾಳೆ. ಕುಂದಾ ಮುಂಬೈಯಲ್ಲಿ ನೌಕರಿ ಮಾಡುತ್ತಿದ್ದಾಳೆ. ಮುಂಬೈಗೆ ಬಂದು ತನ್ನ ಜೊತೆ ಇರುವಂತೆ ಅವಳು ತನ್ನ ತಾಯಿಗೆ ಹೇಳುತ್ತಿರುತ್ತಾಳೆ. ಆದರೆ ತಾಯಿ ಮುಂಬೈಗೆ ಬರಲು ಸಿದ್ಧಳಿಲ್ಲ.

ಅಮೆರಿಕೆಯಲ್ಲಿರುವ ಮಗ ಎರಡು ವರ್ಷಕ್ಕೊಮ್ಮೆ ಗೋವೆಗೆ ಬರುತ್ತಾನೆ. ಅವನಿಗಾಗಿ ಅವಳು ಮನೆಯನ್ನು ಸಂಭಾಳಿಸಿ ಇಟ್ಟುಕೊಳ್ಳುತ್ತಾಳೆ. ಮನೆ ಖಾಲಿ ಮಾಡಿ ಮುಂಬೈಗೆ ಬಂದರೆ ಅದು ಕುಸಿದು ಬೀಳಬಹುದೆಂದು ಹೇಳುತ್ತಾಳೆ. ಆದರೆ ಅದನ್ನು ಸಂಭಾಳಿಸುತ್ತಾ, ಸಂಭಾಳಿಸುತ್ತಾ ತಾನೂ ಕುಸಿಯಬಹುದೆಂಬುದು ಅವಳ ಗಮನಕ್ಕೆ ಬಂದಿಲ್ಲ. ಕುಂದಾ ಎಷ್ಟೇ ಹೇಳಿದರೂ, ಅವಳು ತನ್ನ ಹಟ ಬಿಡುವುದಿಲ್ಲ. ಯಾವಾಗಲಾದರೂ ರಜೆಯಲ್ಲಿ ಒಟ್ಟು ಸೇರಿದರೆ ಕುಂದಾಳಿಗೆ 'ಕುಟುಂಬ' ಇರುತ್ತದೆ. ಇಲ್ಲದಿದ್ದರೆ ಅವಳು ಒಬ್ಬಂಟಿ.

ಆದರೆ ಸಾದಾ, ಸರಳ, ಸಾಮಾನ್ಯ ಬದುಕಿನಲ್ಲಿ ಯಾವಾಗ ತಿರುವು ಕಾಣಿಸಿಕೊಳ್ಳುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಸೋಮವಾರದಿಂದ ಶುಕ್ರವಾರದವರೆಗೆ ಕುಂದಾ ಬರೀ ನೌಕರಿಯ ಬೆನ್ನು ಹತ್ತಿ ಇರುತ್ತಾಳೆ. ಶನಿವಾರ ಅವಳು ತನ್ನ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುತ್ತಾಳೆ. ಭಾನುವಾರ, ಅದು ಅವಳ 'ಸಮುದ್ರ' ಭೇಟಿಯ ದಿನ. ಪ್ರತಿ ಭಾನುವಾರ ಅವಳು ನಿಷ್ಠೆಯಿಂದ ಚೌಪಾಟಿಗೆ ಹೋಗುತ್ತಾಳೆ. ಒಬ್ಬಳೇ. ಅವಳಿಗೆ ತಣ್ಣಗೆ, ಶಾಂತ ಚಿತ್ತದಿಂದ ಸೂರ್ಯಾಸ್ತವನ್ನು ನೋಡುವುದು ತುಂಬಾ ಇಷ್ಟ. ಸೂರ್ಯನ ಕೆಂಪುಗೋಲ ಸಮುದ್ರದ ನೀಲಿಯಲ್ಲಿ ಮುಳುಗುವುದನ್ನು ನೋಡುವುದು ಅವಳಿಗೆ ಇಷ್ಟವಾಗುತ್ತದೆ. ಉರಿಯುವ ಆ ಗೋಲ ನೀರನ್ನು ಸ್ಪರ್ಶಿಸಿದಾಗ ಉಂಟಾಗುವ ನಿಶ್ಶಬ್ದ ಸದ್ದನ್ನು ಅವಳು ಅನುಭವಿಸುತ್ತಾಳೆ.

ತಣ್ಣಗೆ ಶಾಂತವಾಗಿರುವ ಜಾಗವನ್ನು ನೋಡಿಕೊಂಡು ಸೂರ್ಯನ ದಿಕ್ಕಿಗೆ ಮುಖ ಮಾಡುತ್ತಾ, ಕಣ್ಣು ಮುಚ್ಚಿ ಉಸಿರಾಟದ ಕ್ರಿಯೆಯಲ್ಲಿ ಮನಸ್ಸನ್ನು ಕೇಂದ್ರೀಕೃತಗೊಳಿಸುತ್ತಾ, ಬಿಗಿದುಕೊಂಡಿರುವ ನರನಾಡಿಗಳು ಸಡಿಲಗೊಳ್ಳುವವರೆಗೆ, ಅರಿವಿಲ್ಲದೆ ಮನಸ್ಸಿನಲ್ಲಿ ಅಚ್ಚೊತ್ತಿದ ನೆನಪುಗಳು ಅಳಿಸಿ ಹೋಗುವವರೆಗೆ... ಕಣ್ಣಿನ ನೋಟದ ಸೂಕ್ಷ್ಮ ಬೆಳಕು ಕಳೆದು ಹೋಗುವವರೆಗೆ, ಹೀಗೆ ಮಾಡುತ್ತಾ, ಮಾಡುತ್ತಾ ಸಂಜೆ ಪೂರ್ತಿಯಾಗಿ ದೇಹವನ್ನು ಆವರಿಸಿಕೊಂಡು, ತಾನೇ ಸ್ವತಃ ಒಂದು ಸಂಜೆಯಾಗುವವರೆಗೆ ಕುಳಿತುಕೊಳ್ಳುವುದು.

ಭಾನುವಾರ ನವಚೈತನ್ಯವನ್ನು ಮೈಗೂಡಿಸಿಕೊಂಡು ಅವಳು ಮನೆಗೆ ಮರಳಿದಳು. ಆದರೆ ಯೋಚಿಸಿದ ರೀತಿಯಲ್ಲಿ ಯಾವಾಗಲೂ ನಡೆಯುವುದು ಸಾಧ್ಯವಿಲ್ಲ. ಆ ದಿನ ಅವಳು ಚೌಪಾಟಿಗೆ ಹೋಗಲೇ ಇಲ್ಲ. ಬೆಳಗ್ಗೆಯಿಂದ ಅವಳಲ್ಲಿ ಏನೋ ತಳಮಳ... ಎರಡು ಬಾರಿ ವಾಂತಿಯೂ ಆಯಿತು. ಇಡೀ ದಿನ ಅವಳು ಮಲಗಿದಲ್ಲಿಯೇ ಕಳೆದಳು. ತಾನು ಹೋಗದಿದ್ದರೆ ಏನಾಯಿತು, ಅಲ್ಲಿ ದೂರದಲ್ಲಿ ಸೂರ್ಯನಿಗೆ ಉರಿ ಹತ್ತಿಕೊಂಡಿರಬಹುದು... ದೂರ, ಬಹುದೂರ... ತನ್ನ ಕಿಟಕಿಯಿಂದ ಆಚೆ, ಕಟ್ಟಡದ ಕೋಟೆಯ ಆಚೆ, ಶಂಕರನ ಕೆಂಪು ಹೂಗಳ ಗಿಡಗಳ ಆಚೆ, ಟೆರೆಸ್ ಮೇಲಿನ ಆಂಟೆನಾದಿಂದ ಆಚೆ, ರಸ್ತೆಯ ಮೇಲೆ ಓಡಾಡುವ ನಿಬಿಡ